A.—Sri ALUR HANUMANTHAPPA (Deputy Minister for Minor Irrigation).—

(*a*) Yes.
(*b*) Yes.
(*c*) Estimated cost Rs. 4.77 lakhs. Atchkat likely to be irrigated 900 Acres.
(*d*) After the estimate is sanctioned and funds provided therefor in the budget estimates.

2-00 P.M.

ಶ್ರೀ ಎನ್. ಎ. ಚನ್ನೇಗೌಡ.—ಈ ಅಂದಾಜನ್ನು ಎಂದು ಮಾಡಲಾಯಿತು ? ಅದಕ್ಕೆ ಏಕೆ ಮಂಜೂರಾತಿ ಬಂದಿಲ್ಲ ?

†ಶ್ರೀ ಆಲೂರು ಹನುಮಂತಪ್ಪ.—ಅಂದಾಜು ತಯಾರು ಮಾಡಿ ಈಗಾಗಲೇ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—1947ರಿಂದ ಎಷ್ಟು ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡಿಸಿದ್ದೀರಿ ? ಮತ್ತು ಎಷ್ಟು ಕೆರೆಗಳನ್ನು ಕಟ್ಟಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ವಿವರವಾಗಿ ಉತ್ತರ ಕೊಡುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ.—ನಮ್ಮಲ್ಲಿ ಒಂದು ಸಣ್ಣ ನೀರಾವರಿ ಕೆಲಸವನ್ನೂ ಮಾಡಿಸಲಿಲ್ಲ, ಒಂದು ಕೆರೆಯನ್ನೂ ಕಟ್ಟಿಸಲಿಲ್ಲ. ಮಾನ್ಯ ಸಚಿವರಿಗೂ ಅದು ಗೊತ್ತಿದೆ. ಅವರು ಇದರಲ್ಲಿ ಮುಲ ತಾಯಿ ಮನೋಭಾವನೆಯನ್ನು ಬಿಟ್ಟು ಈ ವರ್ಷವೇ ಆ ಕಾಮಗಾರಿಯನ್ನು ಮಾಡಿಸಿ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಅಲ್ಲಿ 15 ಕೆಲಸಗಳು ನಡೆಯುತ್ತಾ ಇವೆ. ಈ ಕೆಲಸ ಆಗಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದರಿಂದ ಅದರ ಬಗ್ಗೆ ಅಂದಾಜು ಸಿದ್ಧವಾಗುತ್ತಿದೆ. ಅದು ಸರ್ಕಾರಕ್ಕೆ ಬಂದನಂತರ ಯೋಚನೆ ಮಾಡಲಾಗುತ್ತದೆ.

Complaints against the Inspector of Schools, Belur

468. Sri S. H. PUTTARANGANATH (Belur).—

Will the Minister for Agriculture and Education be pleased to state :—

(*a*) whether many complaints have been received against the Inspector of Schools, Belur ;
(*b*) if so, what is the nature of complaints and the reasons for not taking any action against the officials so far by the concerned authorities;
(*c*) the number of years required to complete the enquiry standing against the Official ?

A.—Sri K. V. SHANKARA GOWDA (Minister for Agriculture and Education).—

(*a*) Some Complaints were received by the Director of Public Instruction and by the Vigilance Commission.

(*b*) The complaints were : Negligence of duty, Misuse of ' CARE ' Aid to the Primary Schools and unauthorised collection of money, misuse of scholarship amount, and harassment of teachers. Enquiry is going on through the Vigilance Commissioner.

(*c*) The proceedings are going on according to rules. Preliminary enquiry was completed and regular departmental enquiry is going on.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇಷ್ಟು ದೂರುಗಳು ಬಂದಿದ್ದರೂ, ಆ ಅಧಿಕಾರಿಯನ್ನು ಅಲ್ಲಿಯೇ ಇಟ್ಟಿರಲು ಕಾರಣವೇನು ? ಅವರ ಬಗ್ಗೆ ಇನ್ನಷ್ಟು ದೂರುಗಳನ್ನೆಲ್ಲಾ ವಿಚಾರ ಮಾಡುವುದಾದ್ದರೆ, ಅದು ಯಾವಾಗ ಮುಗಿಯುತ್ತದೆ ?

ಶ್ರೀ ಕೆ. ವಿ. ಶಂಕರಗೌಡ.—ಅಧಿಕಾರಿಯು ಮೇಲೆ ದೂರು ಇದ್ದಮಾತ್ರಕ್ಕೆ ಅವರನ್ನು ಬೇರೆ ಕಡೆ ವರ್ಗಮಾಡುವುದಕ್ಕೆ ಆಗುವುದಿಲ್ಲ. ಕೆಟ್ಟ ಅಧಿಕಾರಿ ಎಲ್ಲಿದ್ದರೂ ಕೆಟ್ಟ ಅಧಿಕಾರಿಯೇ. ಆ ದೂರುಗಳ ಬಗ್ಗೆ ವಿಜಿಲೆನ್ಸ್ ಕಮಿಷನ್ನಿನವರ ವಿಚಾರಣೆ ನಡೆಯುತ್ತಿದೆ. ಅದಷ್ಟು ಜಾಗ್ರತೆ ಈ ವಿಚಾರವನ್ನು ತೀರ್ಮಾನಮಾಡಲಾಗುತ್ತದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಈ ಅಧಿಕಾರಿಯ ಬಗ್ಗೆ ಇಷ್ಟೊಂದು ದೂರುಗಳು ಒಂದು ವರ್ಷದಿಂದ ಇದ್ದಾಗ್ಯೂ, ಅವನ್ನು ವಿಚಾರ ಮಾಡಿರುವ ಬಗ್ಗೆ ದೃಢೀಕರಿಸಿ ಮಾತನಾಡಲು ನಿರಾಕರಿಸುವುದಕ್ಕೆ ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಅದರ ಬಗ್ಗೆ ಮಾತನಾಡುವುದಕ್ಕೆ ನಿರಾಕರಿಸಿದ್ದೇನೂ ಇಲ್ಲ. ಆ ವಿಚಾರದಲ್ಲಿ ವಿಚಾರಣೆ ನಡೆಯುತ್ತಾ ಇದೆಯೆಂದು ಹೇಳಿದ್ದೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಈ ಅಧಿಕಾರಿಯನ್ನು ಆ ಸ್ಥಳದಿಂದ ಅದಷ್ಟು ಜಾಗ್ರತೆ ವರ್ಗಮಾಡುವುದರಿಂದ ಅಲ್ಲಿನ ಶಾಲೆಗಳ ಉಪಾಧ್ಯಾಯರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆಂದು ತಾವು ಭರವಸೆಯನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ಅಧಿಕಾರಿಯನ್ನು ವರ್ಗಮಾಡುವುದರಿಂದಲೇ ಅವರಿಗೆ ಪರಿಹಾರ ಸಿಗುವುದಿಲ್ಲ.

Supply of Electricity to villages and Irrigation wells

469. Sri S. M. GUREDDI (Muddebihal).—

Will the Minister for Public Works be pleased to state :—

(*a*) the number of villages and Irrigation wells in respect of which the Mysore State Electricity Board had a schme for supplying electricity during 1967-68 ;

(*b*) the number of villages and wells to which electricity has been supplied so far ?

A.—Sri VEERENDRA PATIL (Minister for Public Works).—

(*a*) 500 villages.
12,000 Irrigation Pump sets.

(*b*) 664 villages.
11,746 Irrigation Pumpsets. (up to the end of January 1968).